05 Nov 2014 9:36 HP Fax

ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
T.M. VIJAY BHASKAR, I.A.S.
Additional Chief Secretary to Government

GOVERNMENT OF KARNATAKA

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ.ಪತ್ರ ಸಂ.ಗ್ರಾಅಪ 207 ಗ್ರಾನೀಸ(5) 13 | ದಿನಾಂಕ:11.4.2014

ವಿಷಯ: 1000 ಶುದ್ಧೀಕರಣ ಘಟಕಗಳ ಕಾರ್ಯಕ್ಷಮತೆ ಧೃಡೀಕರಿಸುವ ಬಗ್ಗೆ.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 207 ಗ್ರಾನೀಸ(5) 2013, ದಿ:8.11.2013 ಮತ್ತು ದಿ:14.11.2013

2013-14ರ ಸಾಲಿನಲ್ಲಿ ರಾಜ್ಯ ಸರ್ಕಾರದ ಆಯವ್ಯಯ ಘೋಷಣೆಗೆ ಪೂರಕವಾಗಿ ನೀರಿನ ಗುಣಮಟ್ಟದ ಸಮಸ್ಯೆಯಿರುವ ಗ್ರಾಮೀಣ ಜನವಸತಿಗಳಲ್ಲಿ ಲಭ್ಯವಿರುವ ಜಲಮೂಲಗಳ ನೀರನ್ನು ಶುದ್ಧೀಕರಿಸಿ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ 1000 ಶುದ್ಧೀಕರಣ ಘಟಕಗಳನ್ನು ಅನುಮೋದಿತ ToR ಪ್ರಕಾರ ಕಾಲಮಿತಿಯೊಳಗೆ ಅಳವಡಿಸಿ, ಕಾರ್ಯಗತಗೊಳಿಸಲು ಉಲ್ಲೇಖಿತ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಅದರನ್ವಯ ಆಯಾ ಜಿಲ್ಲೆಗಳಲ್ಲಿ ಈಗಾಗಲೇ ಅಳವಡಿಸಿರುವ ಶುದ್ಧೀಕರಣ ಘಟಕಗಳು ನಿಗಧಿಪಡಿಸಿದ ತಾಂತ್ರಿಕ ಮಾನದಂಡಗಳನ್ವಯ ಹಾಗೂ ಅನುಮೋದಿತ ಮಾದರಿಯನ್ವಯ ಇವೆಯೇ ಹಾಗೂ ಅವುಗಳ ಕಾರ್ಯಕ್ಷಮತೆ ಸಮರ್ಪಕವಾಗಿದೆಯೇ ಎಂಬ ಅಂಶಗಳನ್ನು ಧೃಡೀಕರಿಸಿಕೊಂಡು ನಂತರ ಬಿಲ್ ಪಾವತಿಸಲು ಕ್ರಮವಹಿಸಬೇಕು. ಈ ಸಲುವಾಗಿ ಅನುಮೋದಿತ ತಜ್ಞ ಸಂಸ್ಥೆಗಳಿಂದ ಒಂದು ತಪಾಸಣೆ ಮಾಡಿಸಿ ನಿರ್ದಿಷ್ಟ ಮಾದರಿಯ ಹಾಗೂ ನಿರೀಕ್ಷಿತ ಗುಣಮಟ್ಟ ಮತ್ತು ಸಾಮರ್ಥ್ಯದ ಶುದ್ಧೀಕರಣ ಘಟಕಗಳನ್ನು ಅಳವಡಿಸಿರುವುದನ್ನು ಖಾತ್ರಿಪಡಿಸಿಕೊಳ್ಳಲು ಕ್ಷಿಪ್ರ ಕ್ರಮ ವಹಿಸಬೇಕು. ಅಂತೆಯೇ, ಆದೇಶಿತ 1000 ಶುದ್ಧೀಕರಣ ಘಟಕಗಳ ಪೈಕಿ, ಅನುಷ್ಠಾನಗೊಳಿಸಿ, ಕಾರ್ಯಾಚರಣೆಯಾಗಿರುವ ಮತ್ತು ಉಳಿದಿರುವ ಘಟಕಗಳು ಯಾವ ದಿನಾಂಕದಂದು ಕಾರ್ಯಗತಗೊಳ್ಳಲಿವೆಯೆಂಬ ಮಾಹಿತಿಯನ್ನು ಸಹ ಜಿಲ್ಲಾವಾರು ತಕ್ಷಣ ಸರ್ಕಾರಕ್ಕೆ ನೀಡಬೇಕು. ಈ ಕುರಿತಂತೆ, ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳು ಮತ್ತು ಕಾರ್ಯಪಾಲಕ ಇಂಜನಿಯರ್‌ಗಳಿಗೆ ಅಗತ್ಯ ಸೂಚನೆ ನೀಡಲು ವೈಯಕ್ತಿಕ ಗಮನ ಹರಿಸಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,

(ಟಿ.ಎಂ.ವಿಜಯ ಭಾಸ್ಕರ್)

ಶ್ರೀ ಜಗನ್ನಾಥ ರೆಡ್ಡಿ,
ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಆನಂದರಾವ್ ವೃತ್ತ, ಗ್ರಾಮೀಣಾಭಿವೃದ್ಧಿ ಭವನ,
ಬೆಂಗಳೂರು-09.

ಪ್ರತಿ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ತುಮಕೂರು.
2. ಕಾರ್ಯಪಾಲಕ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ತುಮಕೂರು.

11/4/14